# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 203 | Pages. 2 | Date: 22-07-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 203 - ಪುಟಗಳು : 2 | 22-07-2026 | ಬುಧವಾರ | Ph: 8762954248 | ದರ : ₹1


# ಶೋಕ ಸಾಗರದಲ್ಲಿ ಗೌಡರ ಕುಟುಂಬ

## 11ನೇ ದಿನದ ಕಾರ್ಯದ ವರೆಗೂ ವಿಷ್ಣು ಸಹಸ್ರ ನಾಮ ಪಠಣ | ಮೌನಕ್ಕೆ ಜಾರಿದ ದೇವೇಗೌಡರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಸಮಾಧಿ ಸ್ಥಳದಲ್ಲಿ ಮಂಗಳವಾರ ಕುಟುಂಬ ಸದಸ್ಯರು ಎರಡನೇ ದಿನದ ಪೂಜೆ ಸಲ್ಲಿಸಿದರು.

ಜು. 30ರಂದು 11ನೇ ದಿನದ ಕಾರ್ಯಗಳು ನಡೆಯಲಿವೆ. ಅಲ್ಲಿವರೆಗೆ ನಂದಾ ದೀಪ ಆರದಂತೆ ವ್ಯವಸ್ಥೆ ಮಾಡಲಾಗಿದೆ. ನಿತ್ಯ ವಿಷ್ಣು ಸಹಸ್ರನಾಮ ಪಠಣೆಗೆ ಸಿದ್ಧತೆ ಕೈಗೊಳ್ಳಲಾಗಿದೆ.

ಅಂತ್ಯಕ್ರಿಯೆ ಬಳಿಕ ಹರದನಹಳ್ಳಿಯ ನಿವಾಸದಲ್ಲೇ ತಂಗಿದ್ದ ಹೆಚ್.ಡಿ.ದೇವೇಗೌಡ ಅವರು ಬೆಳಿಗ್ಗೆ ಪುತ್ರರೊಂದಿಗೆ ಸಮಾಧಿ ಸ್ಥಳಕ್ಕೆ ಆಗಮಿಸಿದರು. ದೇವೇಗೌಡರ ಕುಟುಂಬ ಈಗಲೂ ಶೋಕ ಸಾಗರದಲ್ಲಿ ಮುಳುಗಿದೆ.

ಚನ್ನಮ್ಮ ಅವರ ಸಮಾಧಿ ಹತ್ತಿರಕ್ಕೆ ಬರುತ್ತಿದ್ದಂತೆ ಪುರೋಹಿತರನ್ನು ಬಳಿಗೆ ಕರೆದು ನಂದಾ ದೀಪ ಆರದಂತೆ ನೋಡಿಕೊಳ್ಳಿ ಎಂದರು. ಅದಕ್ಕೆ ದನಿಗೂಡಿಸಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು 11ನೇ ದಿನದ ಕಾರ್ಯ ಮುಗಿಯುವ ವರೆಗೆ ದೀಪ ಉರಿಯುತ್ತಿರಬೇಕು ಎಂದು ಸಲಹೆ ನೀಡಿದರು.

ಶಿವಭಕ್ತೆಯಾಗಿದ್ದ ಚನ್ನಮ್ಮ ಸಮಾಧಿ ಎದುರು ಶಿವನಿಗೆ ಪ್ರಿಯವಾದ ರುದ್ರ ಚಮಕ ಶ್ಲೋಕಗಳನ್ನು ಅರ್ಚಕರು ಪಠಿಸಿದರು. ಮೂವರು ಅರ್ಚಕರು ಶ್ಲೋಕಗಳ ಉದ್ಘೋಷಣೆ ಮೂಲಕ ನಮನ ಸಲ್ಲಿಸಿದರು. ಈ ವೇಳೆ ಆಗಸದಲ್ಲಿ ಗರುಡ ಪ್ರತ್ಯಕ್ಷವಾಗಿ ಸಮಾಧಿ ಸುತ್ತ ಪ್ರದಕ್ಷಿಣೆ ಹಾಕಿದ್ದು ಅಚ್ಚರಿ ಮೂಡಿಸಿತು.

ಶ್ರೀಮತಿ ಚನ್ನಮ್ಮ ಕುಟುಂಬದ ಎಲ್ಲಾ ಮಕ್ಕಳು, ಸೊಸೆಯಂದಿರು ಸಮಾಧಿ ಭಾವುಕರಾದರು. ಹೆಚ್.ಡಿ.ದೇವೇಗೌಡ ಅವರು ತದೇಕಚಿತ್ತದಿಂದ ಸಮಾಧಿಯತ್ತಲೇ ನೋಡುತ್ತಾ ಕುಳಿತಿದ್ದು ನೋಡುಗರ ಕಣ್ಣಾಲಿಗಳನ್ನು ತೇವವಾಗಿಸಿತು. ದೇವೇಗೌಡರ ಬಳಿಗೆ ತೆರಳಿದ ಮಕ್ಕಳು ಸಾಂತ್ವನ ಹೇಳಿದರು.

ಮಗಳು ಅನುಸೂಯ ಸಮಾಧಿ ಮುಂದೆ ಒಬ್ಬಂಟಿಯಾಗಿ ಕುಳಿತು ವೇದ ಮಂತ್ರ ಪಠಿಸಿದರು. ಬುಧವಾರ ಬೆಳಿಗ್ಗೆ 9.30ಕ್ಕೆ ಹಾಲು ತುಪ್ಪ ಕಾರ್ಯ ನೆರವೇರಲಿದೆ. ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಪುತ್ರಿಯರಾದ ಶೈಲಜಾ, ಸೊಸೆಯಂದಿರಾದ ಭವಾನಿ, ಭವಾನಿ, ದೇವೇಗೌಡರ ಒಡನಾಡಿ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ ಹಾಜರಿದ್ದರು.



### ಏನು ಮಾತಾಡಿದೆ ಎಂದು ಗೊತ್ತಾಗಲೇ ಇಲ್ಲ

ತಾಯಿ ಚನ್ನಮ್ಮ ಅವರ ಅಂತ್ಯಕ್ರಿಯೆ ವೇಳೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸದೆ ಇರುವುದರ ಕುರಿತು ಕೆಲವರು ನನ್ನ ಗಮನಕ್ಕೆ ತಂದಿದ್ದಾರೆ. ಉದ್ದೇಶಪೂರ್ವಕವಾಗಿ ಅವರ ಹೆಸರು ಬಿಟ್ಟಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಡಿಸಿದರು. ಜನರು ಸಮಾಧಾನದಿಂದ ಇರಬೇಕೆಂದು ಹೇಳಲು ಆ ಸಂದರ್ಭದಲ್ಲಿ ನಾನು ಮೈಕ್ ಹಿಡಿದಿದ್ದೆ. ನಾನು ಏನು ಮಾತನಾಡುತ್ತಿದ್ದೇನೆ ಎಂಬುದರ ಬಗ್ಗೆ ನನಗೆ ಸ್ಪಷ್ಟತೆ ಇರಲಿಲ್ಲ. ದೇವರೇ ನನ್ನಿಂದ ಆ ಪದಗಳನ್ನು ಆಡಿಸಿದ್ದಾನೆ.

ಆ ಪದ ಬಳಸದೆ ಇರುವ ಸಣ್ಣತನವನ್ನು ನಾನು ತೋರಿಸುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಹೇಳದೇ ಇರಲಿಲ್ಲ. ಈ ವಿಚಾರದಲ್ಲಿ ಯಾರೂ ತಪ್ಪು ತಿಳಿಯಬಾರದೆಂದು ಮನವಿ ಮಾಡುತ್ತೇನೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

### ಮಾವಿನಕೆರೆ ಬೆಟ್ಟದಲ್ಲಿ ಚನ್ನಮ್ಮ ಸ್ಮಾರಕ

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಪ್ರಪಂಚ ಇರುವ ವರೆಗೆ ನಮ್ಮ ತಂದೆ-ತಾಯಿಯ ಸೇವೆ ಚಿರಸ್ಥಾಯಿಯಾಗಿ ಉಳಿಯಬೇಕೆಂಬ ಉದ್ದೇಶದಿಂದ ತಾಯಿ ಚನ್ನಮ್ಮ ಅವರ ಸಮಾಧಿ ಸ್ಥಳವನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸುವ ಕುರಿತು 11ನೇ ದಿನದ ಕಾರ್ಯದಂದು ಬಹಿರಂಗಪಡಿಸಲಾಗುವುದೆಂದರು.

ದೇವೇಗೌಡರ ನಾಲ್ವರು ಪುತ್ರರು, ಪುತ್ರಿಯರು, ನಮ್ಮ ಜೊತೆಯಲ್ಲಿ ಬೆಳೆದ ಸಹೋದರರು, ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸಿ ಈ ಸ್ಥಳ ಅಭಿವೃದ್ಧಿಪಡಿಸಬೇಕು.

ಕೇವಲ ಸ್ಮಾರಕ ಮಾತ್ರವಲ್ಲದೆ ಐತಿಹಾಸಿಕ ಜಾಗ ಇದಾಗಬೇಕು. ಎಲ್ಲರ ಬದುಕಿಗೆ ದಾರಿದೀಪವಾಗಬೇಕೆಂಬ ನಿಟ್ಟಿನಲ್ಲಿ ಸಹೋದರರು ಒಟ್ಟಾಗಿ ಚರ್ಚಿಸಿದ್ದೇವೆ. ಈ ವಿಷಯದಲ್ಲಿ ರಾಜಕೀಯ ಒತ್ತಡ, ದ್ವೇಷ ಇರಬಾರದು. ಬೆಟ್ಟದ ರಂಗನಾಥಸ್ವಾಮಿ ಪಕ್ಕದಲ್ಲಿ ಸಮಾಧಿ ಮಾಡಿದ್ದೇವೆ. ಸರ್ವ ಜನಾಂಗದ ಶಾಂತಿಯ ತೋಟವಾಗಿ ಈ ಸ್ಥಳ ಬದಲಾಗಬೇಕು.

ರಾಜಕೀಯ ಹಂಗಿಲ್ಲದೆ ಯಾರು ಬೇಕಾದರೂ ಇಲ್ಲಿಗೆ ಬರುವಂತಾಗಬೇಕು. ಪಕ್ಷ, ಜಾತಿ ಬೇಧ ಮರೆತು ಈ ಪವಿತ್ರ ಸ್ಥಳದಲ್ಲಿ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯಬೇಕು. ಆ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ ಎಂದರು.



ತಾಯಿ ಚನ್ನಮ್ಮ ದೈವಭಕ್ತೆಯಾಗಿದ್ದ ಹಿನ್ನಲೆಯಲ್ಲಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕೆಂಬ ಉದ್ದೇಶದಿಂದ ಧಾರ್ಮಿಕ ಕೈಂಕರ್ಯ ಕೈಗೊಳ್ಳಲಾಗಿದೆ. ಅಂತ್ಯಕ್ರಿಯೆಯ ಎರಡನೇ ದಿನವಾದ ಮಂಗಳವಾರ ಸಹ ಜನರು ಆಗಮಿಸಿ ಪೂಜೆಯಲ್ಲಿ ಭಾಗವಹಿಸಿದ್ದಾರೆ. ಮೂರನೇ ದಿನವಾದ ಬುಧವಾರ ಬೆಳಿಗ್ಗೆ 9.30ಕ್ಕೆ ಸಮಾಧಿಗೆ ಹಾಲು ತುಪ್ಪ ಬಿಡಲಾಗುವುದು ಎಂದರು.

## ಅರ್ಥಪೂರ್ಣ ಸ್ವಾತಂತ್ರ್ಯ ದಿನಾಚರಣೆಗೆ ಸಿಮೆಂಟ್ ಮಂಜು ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚಿಸಿದರು.

ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿವರ್ಷದಂತೆ ಈ ಬಾರಿಯೂ ತಾಲೂಕು ಆಡಳಿತದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣ ಹಾಗೂ ಶಿಸ್ತಿನಿಂದ ಆಚರಿಸಲಾಗುವುದು. ಸರ್ಕಾರಿ ಇಲಾಖೆ, ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಹಬ್ಬವನ್ನು ಜನಪಾಲ್ಗೊಳ್ಳುವಿಕೆಯಿಂದ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜಾರೋಹಣ, ಸಾರ್ವಜನಿಕ ಸಭೆ, ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಷ್ಟ್ರ ಸೇವೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ ಸೈನಿಕರಿಗೆ ಗೌರವ, ಎಸ್ಎಸ್ಎಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಸನ್ಮಾನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಇದರೊಂದಿಗೆ ಶಾಲಾ ಮಕ್ಕಳಿಗೆ ಸಿಹಿ ವಿತರಣೆ ಸೇರಿದಂತೆ ರಾಷ್ಟ್ರೀಯ ಹಬ್ಬದ ಮಹತ್ವ ಸಾರುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುವುದು. ಎಲ್ಲ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಸ್ವಾತಂತ್ರ್ಯ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಕರೆ ನೀಡಿದರು.

ತಹಸೀಲ್ದಾರ್ ಕೆ.ಎಸ್. ಸುಪ್ರಿತಾ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್ ಇತರರಿದ್ದರು.

## ಬೆಟ್ಟದ ಭೈರವೇಶ್ವರ ಜೀರ್ಣೋದ್ಧಾರ ಸಮಿತಿಗೆ ಸ್ಥಳೀಯರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಇತಿಹಾಸ ಪ್ರಸಿದ್ಧ ಬೆಟ್ಟದ ಭೈರವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು. ಆದರೆ ಮುಜರಾಯಿ ಇಲಾಖೆಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸಮಿತಿಯನ್ನು ರಚಿಸಲಾಗುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮಸ್ಥರು ನೀಡಿರುವ ಸದಸ್ಯರ ಪಟ್ಟಿಯನ್ನು ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದು. ಬಳಿಕ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಸಮಿತಿಗೆ ಅಂತಿಮ ರೂಪ ನೀಡಲಾಗುತ್ತದೆ ಎಂದು ತಿಳಿಸಿದರು.

ದೇವಸ್ಥಾನದಲ್ಲಿ ಫೋಟೋಶೂಟ್ ಸೇರಿದಂತೆ ಕೆಲವು ಚಟುವಟಿಕೆಗಳಿಂದ ಅಹಿತಕರ ಘಟನೆಗಳು ನಡೆದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಫೋಟೋಶೂಟ್‌ಗೆ ಈಗ ಅವಕಾಶ ನೀಡಲಾಗಿದೆ ಎನ್ನುವುದಲ್ಲ. ಈ ಹಿಂದೆಂದೂ ಜನರು ಬರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬೆಟ್ಟದ ಭೈರವೇಶ್ವರ ಕ್ಷೇತ್ರದ ಖ್ಯಾತಿ ಹೆಚ್ಚುರುವುದರಿಂದ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ ನಿರ್ವಹಣೆಯಲ್ಲಿ ಕೆಲವೊಂದು ಸವಾಲುಗಳು ಎದುರಾಗಿವೆ. ಕೆಲವರು ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತಾರೆ. ಇನ್ನೂ ಕೆಲವರಿಗೆ ಕ್ಷೇತ್ರದ ಪಾವಿತ್ರ್ಯದ ಬಗ್ಗೆ ಸಮರ್ಪಕ ಅರಿವು ಇಲ್ಲದ ಕಾರಣ ಕೆಲವೊಮ್ಮೆ ತಪ್ಪುಗಳು ಸಂಭವಿಸುತ್ತವೆ, ಎಂದರು.



ಈ ಹಿನ್ನೆಲೆಯಲ್ಲಿ ಈಗಾಗಲೇ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಭದ್ರತಾ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲ ಇಲಾಖೆಗಳ ಸಮನ್ವಯದೊಂದಿಗೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು ಎಂದು ಹೇಳಿದರು.

ಪ್ರವಾಸೋದ್ಯಮ ಮತ್ತು ಧಾರ್ಮಿಕ ಪಾವಿತ್ರ್ಯ ಎರಡನ್ನೂ ಸಮತೋಲನದಿಂದ ಕಾಪಾಡುವುದು ಅಗತ್ಯವಾಗಿದೆ ಎಂದು ಹೇಳಿದ ಅವರು, ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕಾದರೆ ಪ್ರವಾಸಿಗರು ಬರಬೇಕು. ಆದರೆ ಅತಿಯಾದ ನಿರ್ಬಂಧಗಳಿಂದ ಪ್ರವಾಸೋದ್ಯಮಕ್ಕೂ ಹಿನ್ನಡೆಯಾಗುತ್ತದೆ. ಮತ್ತೊಂದೆಡೆ ಧಾರ್ಮಿಕ ಕ್ಷೇತ್ರದ ಪಾವಿತ್ರ್ಯಕ್ಕೂ ಧಕ್ಕೆ ಉಂಟಾಗಬಾರದು. ಈ ಎರಡನ್ನೂ ಸಮತೋಲನದಿಂದ ನಿರ್ವಹಿಸುವುದು ನಮ್ಮ ಉದ್ದೇಶ ಎಂದು ತಿಳಿಸಿದರು.

ಅರಣ್ಯ ಇಲಾಖೆ ವಿಧಿಸಿರುವ ನಿರ್ಬಂಧಗಳಿಂದ ಪ್ರವಾಸೋದ್ಯಮಕ್ಕೆ ತೊಂದರೆಯಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ಹಲವು ಬಾರಿ ತಂದಿರುವುದಾಗಿ ಶಾಸಕರು ಹೇಳಿದರು. ಅರಣ್ಯ ಪ್ರದೇಶಗಳಲ್ಲಿ ಟ್ರೆಕ್ಕಿಂಗ್‌ಗೆ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿ, ನಿಗದಿತ ಶುಲ್ಕ ಪಡೆದು ಅನುಮತಿ ನೀಡುವ ವ್ಯವಸ್ಥೆ ರೂಪಿಸಬೇಕು ಎಂದು ಸಂಬಂಧಿಸಿದ ಸಚಿವರು ಹಾಗೂ ಸರ್ಕಾರವನ್ನು ಹಲವು ಬಾರಿ ಒತ್ತಾಯಿಸಿದ್ದೇನೆ. ಈ ಕುರಿತು ಇನ್ನೂ ಅಂತಿಮ ನಿರ್ಧಾರವಾಗಿಲ್ಲ. ಮುಂಬರುವ ಅಧಿವೇಶನದಲ್ಲಿಯೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಶೀಘ್ರ ಪರಿಹಾರ ಕಲ್ಪಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

## ಹೋರಾಟಗಾರರ ಮೇಲೆ ಲಾಠಿಚಾರ್ಜ್ ಖಂಡಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೆಹಲಿಯ ಜಂತರ್ ಮಂತರ್‌ನಲ್ಲಿ ನೀಟ್ ಪರೀಕ್ಷೆಯಲ್ಲಿನ ಅಕ್ರಮ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲೆ ಪೊಲೀಸರು ಲಾಠಿಚಾರ್ಜ್ ನಡೆಸಿರುವುದನ್ನು ಖಂಡಿಸಿ ಎಐಡಿಎಸ್‌ಓ ಜಿಲ್ಲಾ ಘಟಕದಿಂದ ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ ಮಾತನಾಡಿ, ನೀಟ್-ಯುಜಿ ಪರೀಕ್ಷೆಯಲ್ಲಿನ ಅಕ್ರಮವನ್ನು ವಿರೋಧಿಸಿ ಸಂಸದ್ ಚಲೋ ಕಾರ್ಯಕ್ರಮದ ಅಂಗವಾಗಿ ಸಂಸತ್ತಿನತ್ತ ತೆರಳುತ್ತಿದ್ದ ವಿದ್ಯಾರ್ಥಿಗಳು ಹಾಗೂ ಯುವಕರ ಮೇಲೆ ಪೊಲೀಸರು ಲಾಠಿಚಾರ್ಜ್ ನಡೆಸಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಆರೋಪಿಸಿದರು.




ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಿದ್ದು, ಮುಂಚಿತವಾಗಿಯೇ ಘೋಷಿಸಲಾಗಿದ್ದ ಶಾಂತಿಯುತ ಮೆರವಣಿಗೆಗೆ ಅನುಮತಿ ನಿರಾಕರಿಸಿ ಪ್ರತಿಭಟನಾಕಾರರ ಮೇಲೆ ಬಲಪ್ರಯೋಗ ನಡೆಸಿರುವುದು ಅಪ್ರಜಾಸತ್ತಾತ್ಮಕ ಕ್ರಮವಾಗಿದೆ. ಕೇಂದ್ರ ಸರ್ಕಾರದ ಈ ದಮನಕಾರಿ ಧೋರಣೆಯನ್ನು ದೇಶದ ವಿದ್ಯಾರ್ಥಿ ಸಮುದಾಯ ಖಂಡಿಸಬೇಕು ಎಂದು ಅವರು ಕರೆ ನೀಡಿದರು. ನೀಟ್ ಸೇರಿದಂತೆ ಎನ್‌ಟಿಎ ನಡೆಸಿದ ವಿವಿಧ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮಗಳಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಸಂಕಷ್ಟಕ್ಕೆ ಸಿಲುಕಿದೆ. ಪರೀಕ್ಷೆ ರದ್ದಾದ ಬಳಿಕ ಉಂಟಾದ ಮಾನಸಿಕ ಒತ್ತಡದಿಂದ ಹಲವಾರು ವಿದ್ಯಾರ್ಥಿಗಳು ಜೀವ ಕಳೆದುಕೊಂಡಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಜನರ ಪ್ರಶ್ನೆಗಳಿಗೆ ಉತ್ತರ ನೀಡಬೇಕಾದ ಸರ್ಕಾರ, ಅವರ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂತದ್ದು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರವು ಸೋನಂ ವಾಂಗ್ಚುಕ್ ಸೇರಿದಂತೆ ಉಪವಾಸ ನಿರತ ಹೋರಾಟಗಾರರೊಂದಿಗೆ ತಕ್ಷಣ ಪ್ರಜಾಸತ್ತಾತ್ಮಕ ಮಾತುಕತೆ ನಡೆಸಬೇಕು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಹಾಗೂ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ)ಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಪದಾಧಿಕಾರಿಗಳಾದ ಭವಾನಿ, ಲಕುಮಿತ, ಕುಸುಮ ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪಾಠಶಾಲಾ ಅಕಾಡೆಮಿಯಿಂದ ವಿವಿಧ ಅವಕಾಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೋವಿಡ್ 19 ಸಂಕಷ್ಟದ ಸಮಯದಲ್ಲಿ ಹುಟ್ಟಿಕೊಂಡ ನಗರದ ಪಾಠಶಾಲಾ ಅಕಾಡೆಮಿ, ಇಂದು ವೈದ್ಯರು, ಇಂಜಿನಿಯರ್ ಹೀಗೆ ತಮಗೆ ಬೇಕಾದ ಕನಸಿನ ಕೋರ್ಸ್‌ಗಳಿಗೆ ಮಕ್ಕಳನ್ನು ಅಣಿಗೊಳಿಸುವ ಏಕೈಕ ಸಂಸ್ಥೆಯಾಗಿ ಬೆಳೆದಿದೆ ಎಂದು ಪಾಠಶಾಲಾ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಸುನಿಲ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಜಿಲ್ಲೆಯ ವಿದ್ಯಾರ್ಥಿಗಳು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅತಿ ಸುಲಭವಾಗಿ ಸೀಟ್ ಪಡೆಯಲು ಹೆಚ್ಚಿನ ಅವಕಾಶ ಕಲ್ಪಿಸಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ 600 ಅಂಕಗಳಿಗಿಂತ ಹೆಚ್ಚಿನ ಅಂಕ ಪಡೆದ ಎರಡು ವಿದ್ಯಾರ್ಥಿಗಳು 590ಕ್ಕಿಂತ ಹೆಚ್ಚು ಅಂಕಗಳಿಸಿದ 4 ವಿದ್ಯಾರ್ಥಿಗಳನ್ನು ನೀಡಿದ ಹಾಸನದ ಏಕೈಕ ವಿಶ್ವಾಸ ಸಂಸ್ಥೆ ಪಾಠಶಾಲಾ ಆಗಿದೆ. 2026 ರಲ್ಲಿ ಕ್ರಮವಾಗಿ 1-5 ವಿದ್ಯಾರ್ಥಿಗಳು 2026ರ ಜೆಇಇ ಮೇನ್ಸ್ -2ರ ಟಾಪರ್ ಆಗಿದ್ದು ಇದರ ಹೆಗ್ಗಳಿಕೆಯಾಗಿದೆ. ಈ ವರ್ಷ ಅಭಿಜ್ಞಾ 605 ಹಾಗೂ ಚಿನ್ಮಯಿ 600 ಅಂಕ ಗಳಿಸಿ ನೀಟ್ ನಲ್ಲಿ ಜಿಲ್ಲಾ ಟಾಪರ್ಸ್ ಆಗಿದ್ದಾರೆ. ಪ್ರಸಕ್ತ ಸಾಲಿನ ನೀಟ್ ಪರೀಕ್ಷೆಯಲ್ಲಿ 400ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಶೇ.30 ರಷ್ಟು ರಿಯಾಯಿತಿ ನೀಡುವ ಯೋಜನೆ ಈ ವರ್ಷದಿಂದ ಪ್ರಾರಂಭವಾಗಲಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಕ್ರಮಬದ್ಧ ಶಿಕ್ಷಣ ವ್ಯವಸ್ಥೆ ಒದಗಿಸಿ ಹಾಸನದ ಮಕ್ಕಳು ರಾಷ್ಟ್ರದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಾತಿ ಪಡೆಯಲು ನಾವು ಉತ್ತಮ ತರಬೇತಿ ನೀಡಲು ಸಿದ್ಧರಿದ್ದು ಜಿಲ್ಲೆಯ ನಾಗರಿಕರು ನಮ್ಮೊಂದಿಗೆ ಕೈಜೋಡಿಸುವಂತೆ ಮನವಿ ಮಾಡಿದರು.




ಕಾರ್ಯದರ್ಶಿ ಮಂಜುನಾಥ್ ಜೆ.ಎಸ್.ಮಾತನಾಡಿ, ಜಿಲ್ಲೆಯ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದ ನೀಟ್ ಹಾಗೂ ಜೆಇಇ ಪರೀಕ್ಷೆಗಳಿಗೆ ನುರಿತ ಶಿಕ್ಷಕರಿಂದ ವಿದ್ಯಾಭ್ಯಾಸ ಒದಗಿಸುವಮೂಲಕ ಜಿಲ್ಲೆಯ ಸ್ಥಳೀಯ ವಿದ್ಯಾರ್ಥಿಗಳು ಬೆಂಗಳೂರು, ಮಂಗಳೂರು ನಗರಗಳಿಗೆ ವ್ಯಾಸಂಗಕ್ಕೆ ಹೋಗುವ ಅವಶ್ಯಕತೆಯನ್ನು ಇಲ್ಲವಾಗಿಸುವುದು ನಮ್ಮ ಆರಂಭದ ಉದ್ದೇಶ ಈಗ ಈಡೇರಿದೆ ಎಂದರು.

ನಾವು ಪ್ರತಿದಿನ ಬೆಳಗ್ಗೆ 9 ರಿಂದ ರಾತ್ರಿ 9 ರ ವರೆಗೂ ತರಗತಿ ನಡೆಸುತ್ತೇವೆ. 2022 ರಲ್ಲಿ 9 ಮಕ್ಕಳು, 2025 ರಲ್ಲಿ 22 ಮಂದಿ ಉಚಿತ ಎಂಬಿಬಿಎಸ್ ಸೀಟ್ ಗಳಿಸಿದ ಹಾಸನದ ಏಕೈಕ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೌಶಿಕ್ ಮತ್ತು ತೇಜಸ್ ಇದ್ದರು.

# ಕೇಂದ್ರ ಶಿಕ್ಷಣ ಸಚಿವ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ನೀಟ್ ಹಾಗೂ ಜೆಇಇ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮಗಳ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಜಿಲ್ಲಾ ಜನಪರ ಚಳುವಳಿ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಮುಂಭಾಗದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಿ ಎನ್.ಆರ್. ವೃತ್ತ ಹಾಗೂ ಬಿಎಂ. ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಬಂದ ಪ್ರತಿಭಟನಗಾರರು ನೀಟ್ ಅಕ್ರಮದ ವಿರುದ್ಧ ಅಮರಣಾಂತ ಉಪವಾಸ ಕುಳಿತಿರುವ ಸೋನಂ ವಾಂಗ್ಚುಕ್ ಅವರಿಗೆ ಬೆಂಬಲ ವ್ಯಕ್ತಪಡಿಸಿದರು.




ದೇಶದ ಲಕ್ಷಾಂತರ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಶಿಕ್ಷಣದ ಕನಸನ್ನು ನನಸಾಗಿಸಿಕೊಳ್ಳಲು ಹಗಲಿರುಳು ಶ್ರಮಿಸಿ ನೀಟ್ ಹಾಗು ಜೆಇಇ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಾರೆ. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ ಹಾಗು ಪರೀಕ್ಷಾ ಅಕ್ರಮಗಳು ಅವರ ಪರಿಶ್ರಮಕ್ಕೆ ಧಕ್ಕೆ ತಂದು, ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಗ್ಗಿಸಿವೆ. ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದ ನೈತಿಕ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಶಿಕ್ಷಣ ಸಚಿವರು ಹೊತ್ತುಕೊಳ್ಳಬೇಕೆಂದು ಆಗ್ರಹಿಸಿದರು.

ದೇಶದ ಶಿಕ್ಷಣ ವ್ಯವಸ್ಥೆಯ ವಿಶ್ವಾಸಾರ್ಹತೆ ಕಾಪಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಹಿನ್ನಲೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬುದು ವಿದ್ಯಾರ್ಥಿ ಸಮುದಾಯದ ಪ್ರಮುಖ ಬೇಡಿಕೆಯಾಗಿದೆ. ಇದೇ ಬೇಡಿಕೆಯನ್ನು ಮುಂದಿಟ್ಟು ಶಿಕ್ಷಣ ಪ್ರೇಮಿ ಸೋನಂ ವಾಂಗ್ಚುಕ್ ದೆಹಲಿಯ ಜಂತರ್-ಮಂತರ್‌ನಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಚಿತ್ರಕಲಾವಿದ ಬಿ.ಎಸ್. ದೇಸಾಯಿ, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್. ವಿಜಯಕುಮಾರ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಧರ್ಮೇಶ್, ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಎಂ.ಸಿ. ಡೋಂಗ್ರೆ, ಬಾಳೆಹಣ್ಣು ವರ್ತಕರ ಸಂಘದ ಜಿಲ್ಲಾಧ್ಯಕ್ಷ ಸಮೀರ್, ಅಜಾದ್ ಟಿಪ್ಪು ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಮುಬಾಶೀರ್ ಅಹಮದ್, ರಮೇಶ್, ಸಿಐಟಿಯು ಮುಖಂಡರಾದ ಎಂ.ಬಿ.ಪುಷ್ಪಾ, ಎ.ಐ.ಡಿ.ಎಸ್.ಓ. ಜಿಲ್ಲಾಧ್ಯಕ್ಷೆ ಚೈತ್ರ, ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಶಿವಣ್ಣ, ಗಂಗಾಧರ್ ಬಹುಜನ್, ನಾರಾಯಣ ದಾಸ್ ಮೊದಲಾದವರಿದ್ದರು.

# ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹುಳಿಗೆರೆ ಗ್ರಾಮದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿಯೊಬ್ಬರ ಶವ ಪತ್ತೆಯಾಗಿದ್ದು, ಗಂಡನ ಮನೆಯವರೇ ಕೊಲೆ ಮಾಡಿದ್ದಾರೆಂದು ಆಕೆಯ ಕುಟುಂಬಸ್ಥರು ಆರೋಪಿಸಿದ್ದಾರೆ.

ಗ್ರಾಮದ ಶೋಭಾ (27) ಮೃತರು. ವಿಜಯಕುಮಾರ್ ಎಂಬಾತನೊಂದಿಗೆ ಒಂಬತ್ತು ವರ್ಷಗಳ ಹಿಂದೆ ವಿವಾಹವಾಗಿದ್ದರು. ಆರಂಭದಲ್ಲಿ ಚೆನ್ನಾಗಿಯೇ ಇದ್ದ ದಾಂಪತ್ಯ ಜೀವನದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬಿರುಕು ಮೂಡಿತ್ತು. ಈ ಸಂಬಂಧ ಹಲವು ಬಾರಿ ರಾಜಿ ಪಂಚಾಯಿತಿ ಮಾಡಲಾಗಿತ್ತು. ಇತ್ತೀಚೆಗೆ ಪತಿ ವಿಜಯ್ ಕುಮಾರ್, ಅತ್ತೆ ಗಂಗ್ಯಮ್ಮ, ಮಾವ ನಂಜುಂಡೇಗೌಡ, ಹೆಣ್ಣು ಮಕ್ಕಳಾದ ಅನಿತ ಮತ್ತು ವಿನುತ ಅವರು ಕ್ಷುಲ್ಲಕ ಕಾರಣಕ್ಕೆ ಶೋಭಾ ಅವರೊಂದಿಗೆ ಜಗಳ ಮಾಡಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು ಎನ್ನಲಾಗಿದೆ.

ಜು. 17ರಂದು ತವರು ಮನೆಯವರಿಗೆ ಕರೆ ಮಾಡಿದ್ದ ಶೋಭಾ ಗಂಡನ ಮನೆಯಲ್ಲಿ ತನಗಾಗುತ್ತಿರುವ ಅನ್ಯಾಯದ ಕುರಿತು ತಿಳಿಸಿದ್ದರು. ಆದರೆ ಆ ದಿನವೇ ವಿಜಯಕುಮಾರ್ ಪತ್ನಿಯನ್ನು ಆಸ್ಪತ್ರೆಗೆ ಸೇರಿಸಿದ್ದಾಗಿ ತಿಳಿಸಿದ್ದ.

ಆಸ್ಪತ್ರೆಗೆ ಬರುಷ್ಟರಲ್ಲಿ ಶೋಭಾ ಮೃತಪಟ್ಟಿದ್ದರು. ಆಕೆಯ ದೇಹದ ಮೇಲೆ ಗಾಯದ ಗುರುತುಗಳಿದ್ದು, ಕೊಲೆ ಮಾಡಿರುವ ಶಂಕೆಯಿದೆ. ಪಾರದರ್ಶಕ ತನಿಖೆ ಮೂಲಕ ಸಾವಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮೃತಳ ಪೋಷಕರು ಆಗ್ರಹಿಸಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 1.30 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಬ್ಬಸಾಲೆ ಮುಖ್ಯರಸ್ತೆಯಿಂದ ಅಜ್ಜಿಗುಡ್ಡೆ ಗ್ರಾಮದವರೆಗೆ 1.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ನೂತನ ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಗುಣಮಟ್ಟದ ರಸ್ತೆ ನಿರ್ಮಾಣ ಅತ್ಯಗತ್ಯವಾಗಿದ್ದು, ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯಕ್ಕೆ ಅವಕಾಶವಿಲ್ಲ. ಜನರ ಹಿತವೇ ನನ್ನ ರಾಜಕೀಯ. ಜನರ ಅಗತ್ಯಗಳಿಗೆ ಸ್ಪಂದಿಸಿ, ಗುಣಮಟ್ಟದ ಮೂಲಸೌಕರ್ಯ ಕಲ್ಪಿಸುವುದು ನನ್ನ ಬದ್ಧತೆಯಾಗಿದೆ ಎಂದು ಹೇಳಿದರು.



ಅಭಿವೃದ್ಧಿ ಕಾಮಗಾರಿಗಳು ಯಾವುದೇ ಪಕ್ಷ ಅಥವಾ ವ್ಯಕ್ತಿಗೆ ಸೀಮಿತವಾಗಿಲ್ಲ. ಕ್ಷೇತ್ರದ ಪ್ರತಿಯೊಬ್ಬ ನಾಗರಿಕರ ಹಿತದೃಷ್ಟಿಯಿಂದ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು, ಮುಂದೆಯೂ ಜನರ ವಿಶ್ವಾಸಕ್ಕೆ ತಕ್ಕಂತೆ ಗುಣಮಟ್ಟದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಬ್ಲಾಕ್ ಮಾಜಿ ಅಧ್ಯಕ್ಷ ಎಚ್.ಬಿ.ಭಾಸ್ಕರ್ ಮಾತನಾಡಿ, ಹೆಬ್ಬಸಾಲೆಅಜ್ಜಿಗುಡ್ಡೆ ರಸ್ತೆ ನಿರ್ಮಾಣವು ಸ್ಥಳೀಯರ ಬಹುಕಾಲದ ಕನಸಾಗಿದ್ದು, ರಾಜ್ಯ ಸರ್ಕಾರದ ಅನುದಾನದಿಂದ ಕಾಮಗಾರಿಗೆ ಚಾಲನೆ ದೊರೆತಿರುವುದು ಸಂತಸದ ವಿಚಾರ ಎಂದು ಹೇಳಿದರು.

ಕ್ಷೇತ್ರದ ಅಭಿವೃದ್ಧಿಗೆ ರಾಜಕೀಯ ಮೀರಿದ ಸಹಕಾರ ಅಗತ್ಯ. ರಸ್ತೆ, ಕುಡಿಯುವ ನೀರು ಸೇರಿ ಮೂಲಸೌಕರ್ಯ ಕಾಮಗಾರಿಗೆ ಸರ್ಕಾರ ಅಗತ್ಯ ಅನುದಾನ ನೀಡುತ್ತಿದ್ದು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ರಸ್ತೆ ಅಗಲೀಕರಣ ಅಗತ್ಯವಿರುವ ಸ್ಥಳಗಳಲ್ಲಿ ಗ್ರಾಮಸ್ಥರು ಸಹಕಾರ ನೀಡಿ ಜಾಗ ಬಿಟ್ಟುಕೊಟ್ಟರೆ ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಮನವಿ ಮಾಡಿದರು.

ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಡಿ. ಸಿ ಸಣ್ಣಸ್ವಾಮಿ, ಹೆಬ್ಬಸಾಲೆ ಗ್ರಾ.ಪಂ. ಮಾಜಿ ಅಧ್ಯಕ್ಷ ಮಹೇಶ್ ಶೆಟ್ಟಿ, ಮುಖಂಡರಾದ ಡಾ.ಸುಧಾಕರ್, ಮೇಘರಾಜ್, ಕೌಶಿಕ್, ಶ್ರೀಜಿತ್, ಆದಿತ್ಯ, ಪ್ರಭಾಕರ್ ಮತ್ತಿತರರಿದ್ದರು.

# ಬಸ್ ಶೆಲ್ಟರ್ ಕಾಮಗಾರಿ ಸ್ಥಗಿತ ಖಂಡಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಹಳೆ ಬಸ್ ನಿಲ್ದಾಣದ ಸಮೀಪ ಉಪನೊಂದಣಾಧಿಕಾರಿ ಹಾಗೂ ಅಬಕಾರಿ ಇಲಾಖೆಗೆ ಸೇರಿದ ಜಾಗದಲ್ಲಿ ನಿರ್ಮಾಣವಾಗುತ್ತಿದ್ದ ಬಸ್ ಶೆಲ್ಟರ್ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಹಿಂದುಪರ ಹೋರಾಟಗಾರ ರಘು ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹಿಂದುಪರ ಹೋರಾಟಗಾರ ರಘು, ಸಕಲೇಶಪುರ ಮಲೆನಾಡು ಪ್ರದೇಶವಾಗಿರುವುದರಿಂದ ಇಲ್ಲಿ ವರ್ಷಪೂರ್ತಿ ಮಳೆ ಹಾಗೂ ಚಳಿ ಹೆಚ್ಚಿರುತ್ತದೆ. ವಿವಿಧ ಭಾಗಗಳಿಂದ ಪಟ್ಟಣಕ್ಕೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಶಾಸಕ್ಕ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಬಸ್ ಶೆಲ್ಟರ್ ನಿರ್ಮಿಸಲಾಗುತ್ತಿತ್ತು. ಕಾಮಗಾರಿ ಶೇ.75ರಷ್ಟು ಪೂರ್ಣಗೊಂಡಿರುವ ಸಂದರ್ಭದಲ್ಲಿ ಅಧಿಕಾರಿಗಳು ಏಕಾಏಕಿ ಕಾಮಗಾರಿ ಸ್ಥಗಿತಗೊಳಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಉಪನೊಂದಣಾಧಿಕಾರಿ ಹಾಗೂ ಅಬಕಾರಿ ಇಲಾಖೆಯ ಕಚೇರಿಗಳು ಈಗಾಗಲೇ ಬೇರೆ ಕಟ್ಟಡಗಳಿಗೆ ಸ್ಥಳಾಂತರಗೊಂಡಿದ್ದು, ಸಂಬಂಧಿತ ಜಾಗ ಸಾರ್ವಜನಿಕ ಬಳಕೆಗೆ ಉಪಯೋಗವಾಗಬೇಕು. ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗುತ್ತಿರುವ ಬಸ್ ಶೆಲ್ಟರ್ ಕಾಮಗಾರಿಯನ್ನು ತಡೆಯುವುದು ಯಾವುದೇ ರೀತಿಯಲ್ಲೂ ಸಮಂಜಸವಲ್ಲ ಎಂದು ಹೇಳಿದರು.

ಕಾಮಗಾರಿ ಸ್ಥಗಿತಗೊಳಿಸುವ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ಜಿಲ್ಲಾಡಳಿತ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಗಮನ ಸೆಳೆಯಲು ಮುಂದಿನ ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆ ಸೇರಿದಂತೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹಳೆ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಬಳಿಕ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರೈಲ್ವೆ ಹೋರಾಟ ಸಮಿತಿಯ ನಾರಾಯಣ ಆಳ್ವ, ಬಿಜೆಪಿ ಮುಖಂಡ ಲೋಹಿತ್ ಕೌಡಳ್ಳಿ, ಹಿಂದು ಹಿತರಕ್ಷಣಾ ವೇದಿಕೆ ಅಧ್ಯಕ್ಷ ಮಂಜು ಕಬ್ಬಿನಗದ್ದೆ, ಮಿಲಿಟರಿ ಧರ್ಮಣ್ಣ, ನಾಗರಾಜ್, ಆಟೋ ರವಿ, ಕೌಶಿಕ್, ಶಿವು ಜಿಪ್ಪಿ, ದಿಲೀಪ್, ಹರೀಶ್ ಆಟೋ, ಮನು ಆಚಂಗಿ, ಪ್ರದೀಪ್ ಮತ್ತಿತರರಿದ್ದರು.

# ಚನ್ನಮ್ಮ-ಎಸ್.ಜಾನಕಿ ನಿಧನಕ್ಕೆ ಸಂತಾಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚನ್ನಮ್ಮ ಹಾಗೂ ಖ್ಯಾತ ಹಿನ್ನೆಲೆ ಗಾಯಕಿ ಎಸ್.ಜಾನಕಿ ಅವರ ನಿಧನಕ್ಕೆ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ಪೆಂಡಾಲ್ ಗಣಪತಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಗಲಗೂಡು ಮಾತನಾಡಿ, ಏಳು ಭಾಷೆಗಳಲ್ಲಿ 48000ಕ್ಕೂ ಹೆಚ್ಚು ಹಾಡುಗಳನ್ನು ಹಾಡುವ ಮೂಲಕ ಜನರ ಮನಸ್ಸು ಗೆದ್ದಿದ್ದ ಜಾನಕಿ ಅವರು ಸಂಗೀತ ಲೋಕದ ಧ್ರುವತಾರೆ. ಕನ್ನಡ ನಾಡು, ಭಾಷೆಗೆ ಗೌರವ ತಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಧರ್ಮಪತ್ನಿ ಚನ್ನಮ್ಮ ಅವರ ಬದುಕು ಜೀವನ ಮಾದರಿಯಾಗಿತ್ತು. ಕುಟುಂಬಕ್ಕೆ ಶಕ್ತಿಯಾಗಿದ್ದ ಅವರು ದೇವೇಗೌಡರಿಗೆ ಸ್ಫೂರ್ತಿಯಾಗಿದ್ದಾರೆ ಎಂದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ.ನಂ.ಲೋಕೇಶ್ ಮಾತನಾಡಿ, ಸಂಗೀತ ಲೋಕದ ಧ್ರುವತಾರೆಯಾಗಿದ್ದ ಎಸ್.ಜಾನಕಿ ಅವರು ಪ್ರಶಸ್ತಿ ಹಿಂದೆ ಎಂದೂ ಹೋಗಲಿಲ್ಲ. ಉದಯೋನ್ಮುಖ ಗಾಯಕರನ್ನು ಪ್ರೋತ್ಸಾಹಿಸುವ ಕಾರ್ಯಕ್ಕೆ ಮುಂದಾಗಿದ್ದರು. ಅಪಾರ ಆಸ್ತಿಯನ್ನ ಹೊಂದಿದ್ದರೂ ಮೈಸೂರಿನ ಬಾಡಿಗೆ ಮನೆಯಲ್ಲಿ ಸರಳ ಜೀವನ ನಡೆಸಿದರು. ದೇವೇಗೌಡರ ಪತ್ನಿ ಚನ್ನಮ್ಮ ಗೌಪ್ಯವಾಗಿ ಸಮಾಜ ಸೇವೆ ಮಾಡುತ್ತಾ ಎಲ್ಲರ ಮನಸ್ಸು ಗೆದ್ದಿದ್ದಾರೆಂದರು.

ಲೇಖಕಿ ಜಯಂತಿ ಚಂದ್ರಶೇಖರ್ ಅವರು ಎಸ್.ಜಾನಕಿ ಅವರ ಹಾಡುಗಳ ಗಾಯನದ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಕೆಂಪೇಗೌಡ ವೇದಿಕೆ ರಾಜ್ಯಾಧ್ಯಕ್ಷ ಆನಂದ್ ಕಾಳೇನಹಳ್ಳಿ, ಕಲಾವಿದ ಜ್ಞಾನದರ್ಶನ ಮಹಾದೇವ್, ಪುಟ್ಟಣ್ಣ ಗೋಕಾಕ್, ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಶಂಕರಾಚಾರ್ ಮಾತನಾಡಿದರು. ಗಣಪತಿ ಸೇವಾ ಸಮಿತಿ ಖಜಾಂಚಿ ಮನೋಹರ್, ಕಲಾವಿದ ಸೋಮಶೇಖರ್, ತುಮಕೂರಿನ ಸಾಹಿತಿ ಲೀಲಾವತಿ, ರೈತ ಸಂಘದ ಪ್ರೇಮಮ್ಮ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಜುಲೈ-22

1947: ಭಾರತದ ಸಂವಿಧಾನ ಸಭೆ ಭಾರತದ ರಾಷ್ಟ್ರೀಯ ಧ್ವಜವನ್ನು ಅಧಿಕೃತವಾಗಿ ಅಂಗೀಕರಿಸಿತು.

1969: ಅಮೆರಿಕದ ಅಪೋಲೊ11 ಬಾಹ್ಯಾಕಾಶ ನೌಕೆ ಚಂದ್ರನಿಂದ ಭೂಮಿಯತ್ತ ಮರಳುವ ಪ್ರಯಾಣ ಆರಂಭಿಸಿತು.

2019: ಭಾರತದ ಚಂದ್ರಯಾನ2 ಬಾಹ್ಯಾಕಾಶ ನೌಕೆಯನ್ನು ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

2023: ಭಾರತದ ಚಂದ್ರಯಾನ3 ಯೋಜನೆ ಚಂದ್ರನ ದಕ್ಷಿಣ ಧ್ರುವದತ್ತ ತನ್ನ ಐತಿಹಾಸಿಕ ಪ್ರಯಾಣವನ್ನು ಮುಂದುವರಿಸಿತು.

**ಜನನ**

1918: ಭಾರತದ ಸ್ವಾತಂತ್ರ್ಯ ಹೋರಾಟಗಾರ ಜಯಪ್ರಕಾಶ್ ನಾರಾಯಣ್

# ಕಡುಬಿನ ಕಳಸಿಗೆಯೆಂಬ ಮಿಲಿಟರಿ ಟ್ಯಾಂಕು-2

**ಧನಂಜಯ ಜೀವಾಳ ಬಿ.ಕೆ.**

ಅದೊಂದು ದಿನ ಸಂಜೆ ಆರರ ಸಮಯದಲ್ಲಿ ಊರಿನ ಮೂರು ದಾರಿ ಕೂಡುವಲ್ಲಿ ಮೂರ್‍ನಾಲ್ಕು ಜನರ ಗುಂಪೊಂದು ಭಾರೀ ಹುರುಪಿನಿಂದ ಯೋಜನೆ ಹಾಕುತಿದ್ದರು. ಕೀರ್ತಿ, ಪುಣ್ಯಮೂರ್ತಿ ಹಾಗೂ ಕರುಣಾಕರ ಈ ಮೂವರೂ ಸೇರಿ ಶಿಕಾರಿಗೆ ಹೊರಟದ್ದರು. ಒಬ್ಬನ ಕೈಯಲ್ಲಿ ಜೋಡು ನಳಿಕೆ ತೋಟಾಕೋವಿ, ಹೆಡ್‌ಲೈಟ್, ಇನ್ನೊಬ್ಬನ ಕೈಯಲ್ಲಿ ಕತ್ತಿ ಹಾಗೂ ಕೈಟಾರ್ಚ್, ಕರುಣಾಕರನ ಕೈಯಲ್ಲೊಂದು ಗೋಣಿ, ಕತ್ತಿ. ಮೂವರೂ ಸೇನೆಯ ಯೋಧರಂತೆ ಊರಬಾಗಿಲಾಚೆಗಿನ ಕಾಡಿನೆಡೆಗೆ ಹೊರಟರು. ಆಗಲೇ ಕತ್ತಲಾಗುತ್ತಿದ್ದ ಸಮಯ. ಸಂಪೂರ್ಣ ಕತ್ತಲಾದ ಮೇಲೆ ಇವರ ಬೇಟೆ ಶುರುವಾಯ್ತು. ಇತ್ತ ಕಡೆ ಇವರುಗಳ ಮನೆಯಲ್ಲಿ ಸಾರಿಗೆ ಸಾಂಬಾರ ಅರೆದುಕೊಂಡು ಕಾಯ್ತಿದ್ದಾರೆ.

ರಾತ್ರಿ ಸುಮಾರು ಎಂಟೂವರೆ ಸಮಯವಿರಬಹುದು. ಕೀರ್ತಿ ಹೆಡ್‌ಲೈಟಿನೊಡನೆ ದಾರಿಯಲ್ಲಿ ಸಿಕ್ಕ ಮರಗಳು, ಪೊದೆಗಳ ಮೇಲೆಲ್ಲಾ ಬೆಳಕು ಚೆಲ್ಲಿ ತನ್ನ ಹದ್ದಿನ ಕಣ್ಣು ಹರಿಸುತ್ತಿದ್ದಾನೆ. ಪುಣ್ಯಮೂರ್ತಿಯ ಮನೆಯ ನಾಯಿ ಡಾಗ್ ಕೀರ್ತಿಗಿಂತ ಮುಂದೆ ಲಂಟಾನದೊಳಕ್ಕೆ ನುಗ್ಗಿ ಇವರುಗಳ ಯೋಜನೆಗಳನ್ನೆಲ್ಲಾ ತಲೆಕೆಳಗು ಮಾಡುತ್ತಾ ಇವರಿಂದ ಅವಾಚ್ಯವಾಗಿ ಬೈಸಿಕೊಳ್ಳುತ್ತಾ, ಕರುಣಾಕರನಿಂದ ಹೊಟ್ಟೆಗೆ ಜಾಡಿಸಿ ಒದೆಸಿಕೊಂಡು ಕುಂಯ್‌ಗುಟ್ಟುತ್ತಾ, ಹಿಂದಿರುಗಿ ಮನೆ ಕಡೆಗೆ ಓಡಿದ್ದು, ಎಷ್ಟೊತ್ತಾದರೂ ಹಿಂದಿರುಗಲಿಲ್ಲ.

ಈ ನಾಯಿಗೆ ಇಂಗ್ಲಿಷ್ ಹೆಸರಿಟ್ಟು ಇಂಗ್ಲೀಷರಿಗೇ ಅದರ ಮೂಲಕ ಬೈದು ಬ್ರಿಟಿಷರ ಮೇಲೆ ಮುಯ್ಯಿ ತೀರಿಸಿಕೊಳ್ಳುವ ಅಂದಾಜಿನಲ್ಲಿ ಯಾವ ಹೆಸರೂ ತೋಚದೇ ಯಾರೋ ಹೇಳಿದರೆಂದು ಡಾಗ್ ಎಂದೇ ಹೆಸರಿಟ್ಟಿದ್ದರು. ಇದೇ ನಾಯಿಯೊಮ್ಮೆ ಮನೆಯೊಳಕ್ಕೆ ನುಗ್ಗಿ ಕಡುಬನ್ನು ತಿಂದಿತೆಂದು ಪುಣ್ಯಮೂರ್ತಿಯ ಅವ್ವ ಅದೇ ಪಾತ್ರೆಯೊಳಗೆ ಸೇರಿಸಿ ಬಿಸಿ ಬಿಸಿ ಹಬೆಯ ನೀರಿನ ಜೊತೆ ಮುಚ್ಚಿ ಇಡೀ ದಿನ ಉರಿ ಬಿಸಿಲಿನಲ್ಲಿ ಇಟ್ಟಿದ್ದು, ಆ ರಣಜೀವದ ನಾಯಿ ಸಂಜೆ ಮೂರು ಗಂಟೆಗೆ ಅದೇ ತನ್ನ ಕೊನೇ ಆಟವೆಂಬಂತೆ ಪಾತ್ರೆಯೊಡನೆಯೇ ತಾನೂ ಉರುಳಿ ಹೊರಬಂದು ಸತ್ತೆನೋ ಕೆಟ್ಟೆನೋ ಎಂದು ಪಲಾಯನಗೈದು ವಾರಗಟ್ಟಲೆ ಊರು ಬಿಟ್ಟಿತ್ತು.

ವಾಪಾಸು ಬಂದಂದಿನಿಂದ ಪುಣ್ಯಮೂರ್ತಿಯ ಅವ್ವನನ್ನು ನೋಡಿದರೆ ಸಾಕು ಅಂತರ್ಧಾನವಾಗುತ್ತಿತ್ತು. ಯಾರೇ ಕಡುಬು ಹಾಕಿದರೂ ಗ್ರೆನೇಡನ್ನೆ ಕಂಡಂತೆ ದಿಕ್ಕಾಪಾಲಾಗುತ್ತಿತ್ತು. ಕಡುಬಿನ ಕಳಸಿಗೆಯನ್ನು ನೋಡಿದರಂತೂ ಮಿಲಿಟರಿ ಟ್ಯಾಂಕನ್ನು ದಿಟ್ಟಿಸುವಂತೆ ಗಲಿಬಿಲಿಗೊಳ್ಳುತ್ತಿತ್ತು.

ದಾರಿಯಲ್ಲಿ ನಡೆಯುತ್ತಿರುವಾಗ ಕೀರ್ತಿಯ ಹೆಡ್‌ಲೈಟ್‌ಗೆ ನೆಲದಲ್ಲಿ ಕುಳಿತಿದ್ದ ದಪ್ಪ ತಲೆಯ ದೊಡ್ಡ ಕಣ್ಣುಗಳ, ನಿರುಪದ್ರವಿ, ಪಾಪದ ಕುರುಡುಗಪ್ಪ ಕಾಣಿಸಬೇಕೇ? ಪುಕ್ಕವೆಲ್ಲಾ ಸೇರಿ ಮುಷ್ಟಿಗಾತ್ರವೂ ಆಗದ ಆ ಹಕ್ಕಿಯನ್ನು ಕೋವಿಯಲ್ಲಿ ಹೊಡೆಯದೇ ಕರುಣಾಕರನಿಂದ ಕತ್ತಿಯಲ್ಲಿ ಚಚ್ಚಿಸಿ ಗೋಣಿಚೀಲ ಸೇರಿಸಿದ್ದರು. ಈ ಪಕ್ಷಿಯು ಟಾರ್ಚ್ ಬೆಳಕು ನೋಡಿದ ಕೂಡಲೇ ಅಚ್ಚರಿಯಿಂದ ಹಾಗೂ ಗೊಂದಲದಿಂದ ದಿಗ್ಭ್ರಾಂತವಾಗಿ ಕುಳಿತುಬಿಟ್ಟಿತು. ಕುಪ್ಪಳಿಸಿ ಕುಪ್ಪಳಿಸಿ ಕರುಣಾಕರನಿಂದ ದೂರ ಹೋಗಲಾಗದೇ ಒಂದೇ ಹೊಡೆತಕ್ಕೆ ಹೆಚ್ಚು ಕಡಿಮೆ ತುಕುಡವೇ ಆಗಿಹೋಯ್ತು.

ಮುಂದೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಒಂದು ಸಾಮಾನ್ಯ ಗಾತ್ರದ ತೊರೆ ಎದುರಾಯಿತು. ನಡೆದು ದಣಿದಿದ್ದ ಇವರುಗಳಿಗೆ ಕಾಣಿಸಿದ್ದು, ಆಹಾರಕ್ಕೋ, ವಿಹಾರಕ್ಕೋ ಹೊರಟಿದ್ದ ಆಮೆ. ಪುಣ್ಯಮೂರ್ತಿ ಹೋದವನೇ ಕಾಲಿನಿಂದ ಅದನ್ನು ಬಲವಾಗಿ ಮೆಟ್ಟಿ ಹಿಡಿದುಕೊಂಡ, ಕೀರ್ತಿ ಓಡಿ ಹೋಗಿ ಅದರ ತಲೆ ಭಾಗದಲ್ಲಿ ಸೆಣಬಿನ ಚೀಲದ ಅಂಚನ್ನು ಹೊಲಿದಿದ್ದ ತೆಳುವಾದ ನೈಲಾನ್ ದಾರವನ್ನು ನೇಣಿನಂತೆ ತೂಗಾಡಿಸಿದ. ಸಿಕ್ಕಿಹಾಕಿಕೊಂಡು ಗಾಬರಿಯಲ್ಲಿದ್ದ ಆಮೆಗೆ ಪುಣ್ಯಮೂರ್ತಿಯ ಪಾದಪ್ರಹಾರವನ್ನು ತಾಳಲಾರದೆ ತಪ್ಪಿಸಿಕೊಳ್ಳುವ ಆತುರದಲ್ಲಿ ನಿಧಾನವಾಗಿ ತಲೆಯನ್ನು ಹೊರಹಾಕಿತು. ಬಿತ್ತೂ ನೋಡಿ ನೇಣು! ಕೀರ್ತಿ ಸಮಯ ನೋಡಿ ರಪಕ್ಕನೆ ನೇಣು ಬಿಗಿದು ನೆಲದಿಂದ ನಾಲ್ಕೈದು ಅಡಿ ಎತ್ತರದಲ್ಲಿ ನೇತಾಡಿಸಿ ಜಗ್ಗಿದ.

ತನ್ನ ಕೊನೆ ಸಂಭವಿಸಿತೆಂದು ಖಚಿತಪಡಿಸಿಕೊಂಡ ಆಮೆ ತನ್ನ ನಾಲ್ಕೂ ಕಾಲುಗಳನ್ನು ನಾಲ್ಕು ದಿಕ್ಕುಗಳಿಗೆ ಅಂತರಿಕ್ಷದಲ್ಲಿ ನಿಗುರಿಸಿ ಚಾಚಿತು. ಅಷ್ಟರಲ್ಲಿ ಮುಂದೆ ಬಂದ ಕರುಣಾಕರ ಕತ್ತಿಯಿಂದ ಚರಚರನೆ ಆಮೆಯ ಕುತ್ತಿಗೆಯನ್ನು ಕೊಯ್ದು ಹಾಕಿದ. ಆಮೆಯ ತಲೆ ಹಾವಿನ ತಲೆಯಂತೆ ಕಾಣುವುದರಿಂದ ಆ ಭಾಗವನ್ನು ತಿನ್ನುವುದು ಬೇಡವೆಂದು ಕಾಡಿನ ದಬ್ಬಲಿನೊಳಗೆ ಎಸೆದ. ಆಮೆ ರಿಪೇರಿಗೆ ಸಾಕಷ್ಟು ಸಮಯ ಹಿಡಿಯುವುದರಿಂದ, ಮುಂದಿನ ಕೆಲಸವನು ಮನೆಯಲ್ಲಿ ಮಾಡುವುದೆಂದು ತಲೆ ಕಳೆದುಕೊಂಡ ಆ ಕೂರ್ಮವನು ಚೀಲಕ್ಕೆ ಸೇರಿಸಿದರು. ನಡೆಯುತ್ತಾ ನಡೆಯುತ್ತಾ ಪುಣ್ಯಮೂರ್ತಿ ಈ ಆಮೆಯ ಜೀವ ಬಾಳಾ ಗಟ್ಟಿ ಮಾರಾಯಾ, ಸಾರು ಕುದಿಯುವಾಗಲೂ ಇದರ ಹೃದಯ ಬಡಿಯುತ್ತಿರುತೆ ಎಂದ.

**ಗ್ರಾಮಾಯಣ 27**

ಹೀಗೆ ನಡೆಯುತ್ತಾ ಸಾಗುತ್ತಿದ್ದಾಗ ಒಂದೆಡೆ ಬೀಡಿ ಸೇದಲು ನಿಂತರು. ಕರುಣಾಕರ ಜೇಬಿನಿಂದ ಅವರ ಮನೆಯಲ್ಲೇ ಕಾಯಿಸಿದ್ದ ಭಟ್ಟಿ ಸರಾಯಿಯ ಬಾಟಲಿ ಹೊರತೆಗೆದು ತಾನೂ ಕುಡಿದು, ಅವರಿಬ್ಬರಿಗೂ ಕುಡಿಸಿದ. ಅಷ್ಟರಲ್ಲಿ ತಟ್ ತಟ್ ಎಂದು ಏನೋ ಮರದಿಂದ ಬೀಳುವ ಸದ್ದು ಮೂವರ ಗಮನ ಸೆಳೆಯಿತು. ಕರುವಿನ ಕಿವಿ ನಿಮಿರುವಂತೆ ಕಿವಿಗಳು ಹೋಯ್ದಾಡಿದವು. ಕಣ್ಣುಗಳು ರಣಹದ್ದಿನ ಕಣ್ಣುಗಳಾದವು. ಮೂವರ ಜಠರಗಳು ಎದ್ದೆದ್ದು ಕುಣಿದವು. ಕೀರ್ತಿಯ ತಲೆಗೆ ಕಟ್ಟಿಕೊಂಡಿದ್ದ ಹೆಡ್‌ಲೈಟ್‌ನ ಸುತ್ತಲಿನ ಮರಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಹರಿದಾಡತೊಡಗಿತು. ಇವರ ಎಡಭಾಗದಲ್ಲಿ ಬೈನೇ ಮರದ ಹೆಡೆಗಳ ಮೇಲೆ ಹೆಡ್‌ಲೈಟ್ ಬಿರುಸಿನಿಂದ ಬೆಳಕು ಬೀರುತ್ತಾ ಸ್ತಬ್ಧವಾಯಿತು.

ಹಳದಿ, ಕೆಂಪು, ಕೇಸರಿ ಛಾಯೆಯ ಭಯ, ಗಾಬರಿಯ ಎರಡು ಸಣ್ಣ ಬಟಾಣಿ ಗಾತ್ರದ ಕಣ್ಣುಗಳು ಪಳಪಳನೆ ಮಿನುಗಲಾರಂಭಿಸಿದವು. ಇನ್ನಿಬ್ಬರಿಗೆ ವಾಸ್ತವದ ಅರಿವಾಗುವುದರೊಳಗೆ ಇಡೀ ಕಾಡೇ ಠಮ್ಮಾರ್ ಎಂಬ ಸದ್ದಿನೊಂದಿಗೆ ಅನುರಣಿಸಿ; ಇಡೀ ಪರಿಸರವೇ ಗಲಿಬಿಲಿಗೊಂಡಿತು. ಕರುಣಾಕರ ಯಂತದು, ಯಂತದು? ಟಿಟಿ ಎಂದು ಕೇಳುವಷ್ಟರಲ್ಲಿ ಕೀರ್ತಿ ಸ್ವಲ್ಪ ಇರಲೆ, ಕಬ್ಬೆಕ್ಕಿಗೆ ಹೊಡ್ದೆ, ಬೀಳ್ಲೇ ಇಲ್ಲಟಿಟಿ ಎಂದು ಮತ್ತೊಮ್ಮೆ ಕಣ್ಣು ಕಾಣಿಸಿದ ಜಾಗಕ್ಕೊ ಲೈಟ್ ಬಿಟ್ಟ. ಕಣ್ಣುಗಳನ್ನು ಗೊಂದಲದಿಂದ ಪಿಳಿಗುಟ್ಟಿಸುತ್ತಾ ಕಬ್ಬೆಕ್ಕು ಕೆಳಗೆ ನೆಗೆಯಲು ನೋಡುತಿತ್ತು. ಈಡು ಸರಿಯಾಗಿ ತಾಗಿರಲಿಲ್ಲ. ಆದರೆ ಮರದ ಕೆಳಗಿನ ದರಗಿನ ಮೇಲೆ ತಟ್ ತಟ್ ಎಂದು ರಕ್ತ ಬೀಳುತಿತ್ತು. ಪುಣ್ಯಮೂರ್ತಿ ಮರದ ಇನ್ನೊಂದು ದಿಕ್ಕಿಗೆ ಹೋಗಿ ಕಾವಲು ನಿಂತ. ಈಗ ಕರುಣಾಕರನಿಗೆ ಡಾಗ್ ಅನ್ನು ಒದ್ದಿದ್ದಕ್ಕೆ ವಿಷಾದವಾಯಿತು. ಬೈನೇ ಮರದಿಂದ ಈಗಲೋ ಆಗಲೋ ನೆಗೆಯಲಿರುವ ಕಬ್ಬೆಕ್ಕನ್ನು ಹಿಡಿಯಲು ನಾಯಿಗಿಂತ ಪ್ರಶಸ್ತ ಬೇರೆ ಬೇಟೆಗಾರನಿಲ್ಲ.

ಕರುಣಾಕರ ಕತ್ತಿಯಿಂದ ಮರವನ್ನು ಕುಟ್ಟಲಾರಂಭಿಸಿದ. ಗಾಢ ಮೌನದ ಮಹಾಕಾಡು ಈ ಶಬ್ದದಿಂದ ಮತ್ತೊಮ್ಮೆ ತಳಮಳಿಸಲಾರಂಭಿಸಿತು. ಸುಮಾರು ಅರ್ಧಗಂಟೆಯಾದರೂ ಮೇಲಿನಿಂದ ಯಾವುದೇ ಪ್ರತಿಕ್ರಿಯೆ ಬರದಾದಾಗ ಕೀರ್ತಿ ಕೋವಿಯನ್ನು ಮುರಿದು ಹಳೇ ಖಾಲಿ ತೋಟಾ ತೆಗೆದು ಬಕ್ಸೇಟು ಹಾಕಿದ ತೋಟಾ ಹಾಕಿ ಇನ್ನೊಂದು ಈಡು ಹಾರಿಸಿದ. ದಪ್ ಎಂದು ಬಿದ್ದ ಕಬ್ಬೆಕ್ಕು ಸರಸರ ಸದ್ದು ಮಾಡಿತು. ಆದರೆ ಈ ಮೂವರ ಕಣ್ಣಿಗೆ ಮಾತ್ರ ಕಾಣಲಿಲ್ಲ.

ಬೈನೇ ಮರದ ಹಣ್ಣುಗಳು ಕಬ್ಬೆಕ್ಕಿಗೆ ಬಹಳ ಪ್ರಿಯವಾದ ಆಹಾರ. ಮರವನ್ನೇರಿ ಹಣ್ಣಿನ ಸಿಪ್ಪೆ ಸುಲಿದು ರಸ ಕುಡಿದು ಸಂಭ್ರಮಿಸುವ ಕಬ್ಬೆಕ್ಕಿಗೆ ಈ ಮೂವರು ಯಮದೂತರಾಗಿ ಬಂದಿದ್ದರು. ಹುಡುಕಿ ಹುಡುಕಿ ಸಾಕಾಗಿ ನಿಂತವರಿಗೆ ಮತ್ತೊಮ್ಮೆ ಕಬ್ಬೆಕ್ಕು ಬಿದ್ದಿದ್ದು ನಿಜವೋ ಸುಳ್ಳೋ ಎಂಬ ಗುಮಾನಿ ಉಂಟಾಯಿತು. ಮತ್ತೊಮ್ಮೆ ಮರಕ್ಕೆ ಬೆಳಕು ಹಾಯಿಸಿ ಹುಡುಕುತ್ತಿರುವಾಗ ದಪ್ ಎಂಬ ಸಣ್ಣ ಸದ್ದು ಕೇಳಿಸಿತು. ಮುಂಚೆಯೇ ನೆಲಕ್ಕೆ ಬಿದ್ದಿದ್ದ ಕಬ್ಬೆಕ್ಕು ಹತ್ತಿರದ ಸಣ್ಣ ಗಿಡವನ್ನು ಏರಿ ಕುಳಿತಿತ್ತು. ದೇಹದಲ್ಲಿನ ಶಕ್ತಿ ಕುಂದುತ್ತಾ ಬಂದಂತೆ ಇನ್ನು ಸಾಧ್ಯವೇ ಇಲ್ಲವೆನಿಸಿದಾಗ ಅಂತಿಮವಾಗಿ ನೆಲಕ್ಕೆ ಬಿದ್ದಿತ್ತಾ ಕಬ್ಬೆಕ್ಕು. ದಡದಡ ಓಡಿಹೋಗಿ ಲಬಕ್ಕನೆ ಹಿಡಿದುಕೊಂಡ ಕೀರ್ತಿ, ಅದರ ಬಾಲ ಹಿಡಿದು ಎತ್ತಿದ. ಅದರ ಜೀವ ಹೆಚ್ಚಿನಾಂಶ ಗಿಡದ ಮೇಲೆಯೇ ಹೋಗಿತ್ತೆಂದು ಕಾಣುತ್ತೆ, ದೇಹದ ಬಿಸಿಯಿನ್ನೂ ಆರಿರಲಿಲ್ಲ. ಅಂದಾಜು ನಾಲ್ಕು ಕೇಜಿ ಇರಬಹುದು, ಲೌಡಿ ಮಗಂದು; ಎರಡು ತೋಟಾ ತಿಂತಲ್ಲ, ತಗಾ ಗೋಣಿಗೆ ಹಾಕ್ಕಟಿಟಿ ಎಂದ.

ಇವರುಗಳ ಶಿಕಾರಿಯು ಮುಗಿದಂತೆ ಕಾಣಲಿಲ್ಲ. ಹಾಗೇ ಪೊದೆಗಳು, ಮರಗಳ ಮೇಲೆ ಟಾರ್ಚ್ ಬೆಳಕನ್ನು ಚೆಲ್ಲುತ್ತಾ ಹೊರಟರು. ಈಗ ಕೋವಿ ಹಾಗೂ ಹೆಡ್‌ಲೈಟನ್ನು ಧರಿಸಿದವನು ಕರುಣಾಕರ, ಗೋಣಿಚೀಲ ಹೊರುವ ಸರದಿ ಪುಣ್ಯಮೂರ್ತಿಯದು. ಕಾಡನ್ನು ದಾಟಿ ಮುಂದುವರೆದವರಿಗೆ ಈಚಲು ಹರಕ್ಕೆ ಬಂದಿದ್ದರು. ಅಲ್ಲಲ್ಲಿ ಸೀಮೆಸೀಗೆ ಲಂಟಾನ, ಕೆಂಜಿಗೆ ಪೊದೆಗಳಿದ್ದ ಆ ಕುರುಚಲು ಪ್ರದೇಶದಲ್ಲಿ ಈಚಲಗಿಡಗಳು ಕಣ್ಣುಹಾಯಿಸಿದಷ್ಟು ದೂರಕ್ಕೂ ಬೆಳೆದಿದ್ದವು. ಸುಮಾರು ಒಂದು ಮೈಲು ನಡೆದಿರಬಹುದು. ನೆಲದ ಮೇಲೆ ಕೆಂಪಗಿನ ಒಂದು ಜೋಡಿ ಕಣ್ಣುಗಳು ಕಾಣಿಸಿದವು. ಕೀರ್ತಿ ಹಿಂದಿನಿಂದ ಮೊಲ! ಮೊಲಾ! ಇಟ್ಟಾಕು, ಇಟ್ಟಾಕುಟಿಟಿ ಎಂದು ಮೆಲು ಧ್ವನಿಯಲ್ಲಿ ಅರಚಿದ. ಕರುಣಾಕರ ತಡಬಡಾಯಿಸಿ ಕುದುರೆ ಎಳೆದವನೇ ಪುಟಪುಟು ನೆಗೆಯುತ್ತಾ ಟಾರ್ಚ್ ಬೆಳಕಿನಿಂದ ಗಲಿಬಿಲಿಗೊಂಡು ಇವರತ್ತಲೇ ಬರುತ್ತಿದ್ದ ಮೊಲಕ್ಕೆ ಹೊಡೆಯುವ ಬದಲು ನೆಲಕ್ಕೇ ಗುಂಡಿಟ್ಟಿದ್ದ. ಮೊಲ ಸತ್ತೆನೋ ಕೆಟ್ಟೆನೋ ಎಂದು ದಿಕ್ಕಾಪಾಲಾಯ್ತು. ಸಿಟ್ಟಿನಿಂದ ಉರಿದೆದ್ದ ಪುಣ್ಯಮೂರ್ತಿ ಇಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲದ ಪದಗಳನ್ನು ಉಪಯೋಗಿಸಿ ಕರುಣಾಕರನ ಜನ್ಮ ಜಾಲಾಡಿಸಿದ್ದ. ಮಾಡಿದ್ದ ತಪ್ಪಿನಿಂದ ಅವಮಾನಿತವಾದ ಕರುಣಾಕರ ಹ್ಯಾಪ ಮೋರೆ ಹಾಕ್ಕೊಂಡು ನಿಮ್ಮ ತಾರಾಟದಿಂದ ನನ್ನ ಈಡು ಮುಂದಾಯ್ತು.

ನಾನೇನು ಶಿಕಾರಿ ಮಾಡಿಲ್ವಾ? ಇಗ ಕೋವೀಯ, ನೀನೇನು ಕಿಸೀತಿಯೋ ನೋಡ್ತೇನಿಟಿಟಿ ಎಂದು ಪುಣ್ಯಮೂರ್ತಿಗೆ ಕೋವಿ ಕೊಟ್ಟ. ಬೈಯುವುದನ್ನು ಇನ್ನು ನಿಲ್ಲಿಸಿರದ ಪುಣ್ಯಮೂರ್ತಿ ಕೋವಿಯನ್ನು ಅಕ್ಷರಶಃ ಕಿತ್ತುಕೊಂಡೇ ಹೆಡ್‌ಲೈಟ್‌ನ್ನು ಕಟ್ಟಿಕೊಂಡ.

ಸಿಟ್ಟಿನಿಂದ ದುಸು ದುಸು ಎನ್ನುತ್ತಾ ಹಿಂದೆ ಬರುತ್ತಿದ್ದವರಿಬ್ಬರೂ ನನ್ನನ್ನು ಹಿಂಬಾಲಿಸುತ್ತಾ ಏದುಸಿರು ಬಂದು ಉಬ್ಬಸದಿಂದ ಸಾಯಲಿ ಎಂದೇ ಗುಂಡಿ, ಗೊಟರು, ದಿಬ್ಬ, ಕೊರಕಲೆಂದು ಗಣನೆಗೆ ತೆಗೆದುಕೊಳ್ಳದೆ ಮೈಮೇಲೆ ದೇವರು ಬಂದವರಂತೆ ಅಲ್ಲಲ್ಲಿ ಮುಳ್ಳು ಕಂಟಿಗಳನ್ನು ಲೆಕ್ಕಿಸದೆ ಮೈಕೈಯೆಲ್ಲಾ ಹರಿದುಕೊಂಡು ನಡೆಯುತ್ತಿದ್ದ.

ಹಿಂದಿದ್ದ ಕೀರ್ತಿ, ಕರುಣಾಕರರಿಬ್ಬರೂ ಸಾಯ್ಲಿ ಸೂಳೇಮಗ, ಹಿಂಗೆ ಹುಚ್ನಾಯಿ ಕಡಿದವನಂತೆ ನುಗ್ಗಾಡಿಕೊಂಡು ಹೋದ್ರೆ ಶಿಕಾರಿಯಾಗಕ್ಕೆ ಇವನಪ್ಪ ಏನಾದ್ರು ಕಟ್ಟಿ ಹಾಕಿ ಬಂದಿರ್‍ತಾನಾ? ನಿಂತ್ಕಳನ ಸ್ವಲ್ಪ ಹೊತ್ತುಟಿಟಿ ಎಂದು ಸಿಕ್ಕಿಹಾಕಿಕೊಳ್ಳುತ್ತಿದ್ದ ಉಸಿರನ್ನು ಬಿಡಿಸಿಕೊಳ್ಳಲು ಪ್ರಯತ್ನಿಸತೊಡಗಿದರು. ಕರುಣಾಕರ ಒದಗಿಸಿಕೊಟ್ಟಿದ್ದ ಭಟ್ಟಿ ಸಾರಾಯಿಯನ್ನು ಕೊಂಚ ಹೆಚ್ಚಾಗಿಯೇ ಏರಿಸಿದ್ದ ಪುಣ್ಯಮೂರ್ತಿ ಮನಸ್ಸಿನಲ್ಲಿ ರಾಬಿನ್‌ಹುಡ್‌ನನ್ನು ಕಲ್ಪಿಸಿಕೊಂಡಿದ್ದನೇನೋ.

ಇನ್ನೇನು ಹೊರಡೋಣ ಎನ್ನುವಷ್ಟರಲ್ಲಿ ಠಮ್ಮಾರ್‌ಟಿ ಎನ್ನುವ ಸದ್ದು ಇಡೀ ನೀರವ ಕಾಡನ್ನು ರ್‍ರುಮ್ ಎಂದು ಬಡಿದೆಬ್ಬಿಸಿತು. ಈ ನನ್ಮಗ ಕುಡಿದ ಅಂದಾಜಿನಲ್ಲಿ ಎಲ್ಲಿಗಿಟ್ಟನೋ ಎಂದು ತಡಬಡಿಸಿದ ಇಬ್ಬರೂ ಗುಂಡು ಹಾರಿದ ಸ್ಥಳದತ್ತ ಅಂದಾಜಿನಲ್ಲಿ ದೌಡಾಯಿಸಿದರು.

ದೈತ್ಯಾಕಾರದ ಹೆಬ್ಬಲಸಿನ ಮರದ ಕೆಳಗೆ ಕೋವಿ ಮುರಿದು ಹಳೇ ಖಾಲಿ ತೋಟಾ ತೆಗೆದು ಹೊಸದನ್ನು ಲೋಡ್ ಮಾಡ್ತಿದ್ದ ಪುಣ್ಯಮೂರ್ತಿ. ಇಡೀ ವಾತಾವರಣದಲ್ಲಿ ರಪರಪ ಸದ್ದು ಅನುಕರಣಿಸುತಿತ್ತು. ನೋಡು ಏವಿನ ಗಿಡದ ಕೆಳಗಿನ ಕೊಂಬೆ ಮೇಲೆ ಸಿಕ್ಕಿಹಾಕಿಕೊಂಡಿರಬೇಕು; ಎತ್ಕಂಡು ಬಾಟಿಟಿ ಎಂದ. ಸಾವಿರಾರು ಬಾವಲಿಗಳು ನಿರಾಂತಕವಾಗಿ ಜೋತಾಡುತಿದ್ದ ಹೆಬ್ಬಲಸಿನ ಮರದೆಡೆಗೆ ಕುಡಿದ ಅಮಲಿನಲ್ಲಿ ಅಂದಾಜಿಗೆ ಗುಂಡು ಹಾರಿಸಿದ್ದ.

ಕೀರ್ತಿ ಕೈಲಿದ್ದ ಲೈಟನ್ನು ಹೆಬ್ಬಲಸಿನ ಮರದ ವಿಶಾಲವಾದ ಕೊಂಬೆಗಳತ್ತ ಹರಿಸಿದಾಗ ಇಡೀ ಮರಕ್ಕೆ ಸಣ್ಣ ಕೆಂಪು ಬಲ್ಬ್‌ಗಳ ಸರಮಾಲೆಯನ್ನೇ ಸುತ್ತಿದ್ದಾರೇನೋ ಎನ್ನುವಂತೆ ಸಾವಿರಾರು ಜೋಡಿಕಣ್ಣುಗಳು ಪಳಪಳನೆ ಉರಿಯುತ್ತಿದ್ದವು. ಬಾವಲಿಗಳು ಗುಂಡು ಹಾರಿದ ಕೂಡಲೇ ಸ್ವಲ್ಪ ಮಾತ್ರ ವಿಚಲಿತವಾಗಿ ಗದ್ದಲವೆಬ್ಬಿಸಿ ಮತ್ತದೇ ಮರದಲ್ಲಿ ಏನೂ ಸಂಭವಿಸಿಯೇ ಇಲ್ಲವೆಂಬಂತೆ ನೇತಾಡತೊಡಗಿದವು.

ಕರುಣಾಕರ ಟಾರ್ಚ್ ಹಾಕಿಕೊಂಡು ಬಿದ್ದಿದ್ದ ಬಾವಲಿಯನ್ನು ಹುಡುಕಾಡುತ್ತಿದ್ದ. ನೆಲದಿಂದ ಎರಡು ಮೂರು ಅಡಿ ಎತ್ತರದಲ್ಲಿ ಗಿಡವೊಂದನ್ನು ಏರಲು ಪ್ರಯತ್ನಿಸುತ್ತಿದ್ದ ಬಾವಲಿಯ ಹೊಟ್ಟೆಯ ಭಾಗದಲ್ಲಿ ರಕ್ತ ಸೋರುತ್ತಿತ್ತು. ಮೊದಲ ಬಾರಿಗೆ ಬಾವಲಿಯನ್ನು ಹತ್ತಿರದಿಂದ ನೋಡುವವರಿಗೆ ನಿಜವಾಗಿಯೂ ಮೈಮೇಲೆ ಮುಳ್ಳುಗಳೇಳುವಷ್ಟು ದಿಗಿಲಾಗುವುದು ಸಹಜವೇ. ಥೇಟ್ ನಾಯಿಯ ಹಾಗೆ ಅದರಲ್ಲೂ ಅಲಸೇಷಿಯನ್ ತಳಿಯ ನಾಯಿಯ ಮುಖದಂತೆ ರೂಪ ಹೊಂದಿರುವ ಈ ಪ್ರಾಣಿಗೆ ಯಾಕಾದರೂ ತೆಳು ರಬ್ಬರಿನಂಥ ರೆಕ್ಕೆಗಳು ಮೂಡಿದವೋ ಎನ್ನಿಸುತ್ತದೆ. ಕಾಲು, ರೆಕ್ಕೆ, ಎಂದು ವಿಂಗಡಿಸಿ ನೋಡಲು ಗೊಂದಲವಾಗುವಂತೆ ಒಂದರೊಳಗೊಂದು ವಿಶಿಷ್ಟ ರೀತಿಯಲ್ಲಿ ಒಡಮೂಡಿರುತ್ತವೆ. ಗಾಬರಿ, ಆರ್ತತೆಯಿಂದ ಕರುಣಾಕರನತ್ತ ನೋಡಿದ ಬಾವಲಿ ರೆಕ್ಕೆಗಳನ್ನು ಬಡಿಯಲು ಗಿಡದ ಮೇಲೇರಲು ಪ್ರಯತ್ನಿಸುತ್ತಿರುವಾಗ ಕೈಲಿದ್ದ ಕತ್ತಿಯಿಂದ ಅದರ ತಲೆಗೆ ಬಲವಾದ ಏಟು ಹಾಕಿ ಅದರ ಪರಲೋಕ ಯಾತ್ರೆಯ ಪಾಸ್‌ಪೋರ್ಟ್‌ಗೆ ಕಡೆಯ ಸಹಿಯನ್ನು ಹಾಕಿದನಾ ಕರುಣಾಮಯಿ.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248